# ಹೆತ್ತವರಿಗೆ...

'ಹೆತ್ತವರಿಗೆ ಹೆಗ್ಗಣ ಮುದ್ದು...' ಎಂಬ ಜನಪ್ರಿಯ ಮಾತು ನಮ್ಮಲ್ಲಿದೆ. ಇಂದಿನ ಯುವಕರು ನಾಳಿನ ನಮ್ಮ ನಾಡಿನ ನಿರ್ಮಾಪಕರು ಎಂಬ ಮಾತು, ಅವರು ಗಿಡವಾಗಿ ಮರವಾಗಿ ಬೆಳೆಯುವ ಹಂತದಲ್ಲಿ ಯಾವ ಬಗೆಯಲ್ಲಿ ಗಟ್ಟಿಯಾಗಬೇಕು ಎಂಬುದನ್ನು ಧ್ವನಿಸುತ್ತದೆ. ಅವರನ್ನು ಗಟ್ಟಿಗೊಳಿಸುವ ಕ್ರಿಯೆಯಲ್ಲಿ ಹೆತ್ತವರ ಪಾತ್ರ ಹಿರಿದಾದುದು. ಅವರ ಪರಿಸರ, ಗೆಳೆಯರು, ಗುರುಗಳು, ಓದು ಮುಂತಾದವು ಅವರ ಅಂತರಂಗದ ವಿಕಾಸಕ್ಕೆ ಕಾರಣವಾಗುತ್ತವೆ ಎಂಬುದು ಸತ್ಯವಾದರೂ; ಹೆತ್ತವರ ಮಾರ್ಗದರ್ಶನ, ನಡೆ ನುಡಿ ವರ್ತನೆಗಳು ಮಹತ್ತರವಾಗಿ ಪ್ರಭಾವ ಬೀರುತ್ತವೆ. ಮಕ್ಕಳ ರೂಪ, ಆಕಾರ, ಧ್ವನಿ, ದೈಹಿಕ ಚಲನೆ ಮುಂತಾದ ಜೈವಿಕ ಸ್ವರೂಪಗಳು ಮಾತ್ರವಲ್ಲದೆ ನೈತಿಕ ಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ಹೆತ್ತವರು ಬಹು ಮುಖ್ಯ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ.

ಮಕ್ಕಳನ್ನು ಪ್ರೀತಿಸಬೇಕು ನಿಜ, ಮುದ್ದಿಸಬೇಕೆಂಬುದೂ ದಿಟ. ಆದರದು ಅತಿಯಾಗಬಾರದು. ಪ್ರೀತಿ ಬದುಕನ್ನು ಕಟ್ಟುವ ಕ್ರಿಯೆಯಾಗಬೇಕೇ ಹೊರತು ಬದುಕನ್ನು ದಾರಿ ತಪ್ಪಿಸುವ ಸಾಧನವಾಗಬಾರದು. ನಮ್ಮ ಗ್ರಾಮೀಣ ಸಮುದಾಯದಲ್ಲಿ ಮಕ್ಕಳನ್ನು ಮುದ್ದಿಸುವಾಗ ಮುದ್ದಿಸುತ್ತಿದ್ದರು, ಜೊತೆಯಲ್ಲೇ ಒಂದು ಎಚ್ಚರದ ಅಂಕೆ ಕಾವಲು ಕಾಯುತ್ತಿತ್ತು. ನಮ್ಮ ನಗರ ಜೀವನದ ಮಧ್ಯಮವರ್ಗದ ಹಿರಿಯರು 'ಮಕ್ಕಳ ಮೇಲಿರುವ ಪ್ರೀತಿ ಅಭಿವ್ಯಕ್ತಿ ರೂಪದಲ್ಲಿರಬಾರದು, ಅದು ಹೃದಯದಲ್ಲಿರಬೇಕು' ಎನ್ನುತ್ತಿದ್ದರು. ಈ ಎರಡೂ ಪ್ರೀತಿಯ ಸ್ವರೂಪಗಳ ಬಗ್ಗೆ ಇಂದಿನ ಮನಃಶಾಸ್ತ್ರ ಭಿನ್ನಾಭಿಪ್ರಾಯ ವ್ಯಕ್ತಪಡಿಸಬಹುದು. ಆದರೆ ಈ ಸ್ವರೂಪದ ನಮ್ಮ ಹಿರಿಯರ ನಡತೆಯಲ್ಲಿ ಲೋಕಾನುಭವದಿಂದ ರೂಪಿತವಾದ ಜೀವನ ದೃಷ್ಟಿ ಇತ್ತು ಎಂಬುದನ್ನು ಅಲ್ಲಗಳೆಯಲಾಗದು. ಅಂಕೆಯಲ್ಲಿಡುವುದು ಊಳಿಗಮಾನ್ಯ ಧೋರಣೆಯನ್ನೂ ಪ್ರೀತಿಯ ಅಭಿವ್ಯಕ್ತರಾಹಿತ್ಯವನ್ನು ಶೀಥಲತೆಯನ್ನೂ ಸೂಚಿಸಬಹುದು. ಆದರೆ ಮಕ್ಕಳನ್ನು ಬೆಳೆಸುವ ಕ್ರಮದಲ್ಲಿ ಒಂದು ಹದವಾದ 'ಟ್ರಿಮ್ಮಿಂಗ್' ಬೇಕು ಎಂಬುದನ್ನು ಆಧುನಿಕ ಕುಟುಂಬಗಳನ್ನು ಮತ್ತು ಅವುಗಳಿಂದ ಸೃಷ್ಟಿಯಾಗಿ ಹೊರಬರುತ್ತಿರುವ ಯುವ ಜನಾಂಗವನ್ನು ನೋಡಿದಾಗ ಅನುಭವಕ್ಕೆ ಬಾರದಿರದು.

ಹೆತ್ತವರಿಗೆ ತಮ್ಮ ಮಗು ಎಂಥ ಅತಿರೇಕದ ತುಂಟಾಟ ಮಾಡಿದರೂ ಹಿತವಾಗಿ ಕಾಣುತ್ತದೆ. ಮಕ್ಕಳಾಗಿದ್ದಾಗ ಮಾತನಾಡುವ, ವರ್ತಿಸುವ ಬಗೆಯನ್ನು ಪ್ರೀತಿಯಿಂದಲೇ ತಿದ್ದುವ ಪ್ರಯತ್ನ ಮಾಡಬೇಕು. ದೊಡ್ಡವರೊಡನೆ ಹೇಗೆ ಮಾತನಾಡಬೇಕು, ಹೊರಗಿನವರು ನಮ್ಮ ಮನೆಗೆ ಬಂದಾಗ ಹೇಗೆ ಕೂರಬೇಕು, ಬೇರೆಯವರ ಮನೆಗೆ ಹೋದಾಗ ಹೇಗೆ ವರ್ತಿಸಬೇಕು ಎಂಬುದನ್ನು ಕಲಿಸಬೇಕು. ಕಲಿಯದಿದ್ದಲ್ಲಿ ತುಸು ಜಂಕಿಸಿ ಹೇಳಬೇಕು. ಆ ಧ್ವನಿಯಲ್ಲಿ ಸ್ವಲ್ಪ ಅಧಿಕಾರವಿರಬೇಕು; ಹಿರಿಯತನದ ಗೌರವದ ಗಡುಸುತನವಿರಬೇಕು. ಈ ಗಡಸುತನವನ್ನು ಭಯಹುಟ್ಟಿಸುವ ಕ್ರಿಯೆಯಾಗಿ ಪರಿವರ್ತಿಸಬಾರದು ಅಷ್ಟೆ. ದೇವಕಿನಂದನ ಕೃಷ್ಣನನ್ನು ಅವನ ತಾಯಿ ಯಶೋದೆ ಅತಿಯಾಗಿ ಪ್ರೀತಿಸುತ್ತಿದ್ದಳೆಂಬುದರಲ್ಲಿ ಸಂಶಯವಿಲ್ಲ. ಅವನು ಗೋಕುಲದಲ್ಲಿ ಅತಿಹೆಚ್ಚು ಎನಿಸುವ ರೀತಿಯಲ್ಲೇ ತುಂಟಾಟ ಮಾಡಿರುವುದು ದಾಸರ ಪದಗಳಲ್ಲಿ ಉಕ್ತವಾಗಿದೆ; 'ಗೀತ ಗೋವಿಂದ'ದಲ್ಲೇನು ಕಡಿಮೆಯಿಲ್ಲ. ಆದರೆ ನಮ್ಮ ಪುರಾಣಗಳು ಅವನನ್ನು ಪರಿಭಾವಿಸಿರುವ ಪರಿಯೇ ಬೇರೆ. ಅವನು ಎಲ್ಲರಂಥಲ್ಲ, ಅತೀತ. ಹೀಗಾಗಿ ಅವನು ಬಾಲ್ಯವನ್ನು ಕಳೆದುಕೊಂಡ ನಂತರ ರೂಪಾಂತರ ಪ್ರಕ್ರಿಯೆಗೊಳಗಾಗಿ ಸಮಾಜ ಮುಖಿಯಾಗಿ ಅರಳುತ್ತಾನೆ. ಅಂಥ ಪುರಾಣಪ್ರಿಯ ಕೃಷ್ಣನನ್ನು ಕೂಡ ಅವನ ಸಾಕುತಾಯಿ ಕಟ್ಟಿ ಹಾಕುತ್ತಾಳೆ, ಗುಮ್ಮನ ಕರೆದು ಹೆದರಿಸುತ್ತಾಳೆ. ನಮಗೆ ಈ ನಡೆ ಮುಖ್ಯ. ಪ್ರತಿ ತಾಯಿಯೂ ಸಾಮಾಜಿಕ ಮುಖಿಗಳನ್ನಾಗಿ, ಕುಟುಂಬ ಮುಖಿಗಳನ್ನಾಗಿ ತಮ್ಮ ಮಕ್ಕಳನ್ನು ಬೆಳೆಸುವ ಜವಾಬ್ದಾರಿಯನ್ನು ಹೊರಬೇಕು.

ಒಂದು ಸುಸಂಸ್ಕೃತ ಸಮಾಜ ನಿರ್ಮಾಣವಾಗಿದೆಯೆಂದರೆ ಅಲ್ಲಿನ ಜನರು ಮಾನವೀಯ ಗುಣಗಳಿಂದ ಸನ್ನಡತೆಗಳಿಂದ ಕೂಡಿರಬೇಕು. ಅವರು ಅಹಂಕಾರಕ್ಕೆ ಹೊರತಾದ ಪ್ರೀತಿ ವಿಶ್ವಾಸ ತುಂಬಿದ ಸ್ವಾಭಿಮಾನದ ಬದುಕನ್ನು ನಡೆಸುತ್ತಿರಬೇಕು. ನೆರೆಹೊರೆಯನ್ನು ತನ್ನಂತೆ ಕಾಣುತ್ತಾ ಜೀವಪರತೆಯನ್ನು ಮೈಗೂಡಿಸಬೇಕು. ಮತಧರ್ಮಗಳು ಜೀವನ ಮಾರ್ಗದ ಈ ಬಗೆಯ ನಡೆಯ ದೃಷ್ಟಿಯನ್ನು ಮೂಡಿಸಿದರೆ ಸರಿ. ಅದರ ಬದಲು ಶ್ರೇಷ್ಠತೆಯ ಅಹಂಕಾರವನ್ನು ಮೂಡಿಸುವಂತಾದರೆ ಅವುಗಳನ್ನು ಖಂಡ ತುಂಡವಾಗಿ ನಿರಾಕರಿಸಬೇಕು. ಶ್ರೇಷ್ಠತೆಯೆನ್ನುವುದು ನಮ್ಮ ಬದುಕಿನ ನಡೆಯಲ್ಲಿ ವ್ಯಕ್ತವಾಗುವ ಸೌಮ್ಯ ಸ್ವರೂಪದ ಗುಣ. ಆ ಗುಣ ನಮಗೆ ಬರಬೇಕಾದರೆ ನಮ್ಮ ಬಾಲ್ಯ-ಕೌಮಾರ್ಯಗಳು ಸರಿಯಾದ ಹದದಲ್ಲಿ ಬೆಳೆದಿರಬೇಕು. ಅದಕ್ಕೆ ಹೆತ್ತವರ ಮುದ್ದು ಸರಿದಾರಿಯಲ್ಲಿರಬೇಕು.

ಇಂದಿನ ನಮ್ಮ ಯುವ ಜನಾಂಗದಲ್ಲಿ ಮರೆಯಾಗುತ್ತಿರುವ ಸನ್ನಡತೆಯ ಮೌಲ್ಯಕ್ಕೆ ನಮ್ಮ ವಿಭಕ್ತ ಕುಟುಂಬಗಳು ಕಾರಣವಾಗಿರಬಹುದೆ? ಅಜ್ಜ ಅಜ್ಜಿಯರು ದೂರದವರಾಗಿರುವುದು ಕಾರಣವಾಗಿರಬಹುದೆ?

■ ಶಿಕಾಕು

## ಮಾತೇ ಮುತ್ತು

★ ಹೆಂಗಸಿನ ಹೊಗಳಿಕೆಗೆ ಹಲ್ಲಿಲ್ಲ; ಅದು ನಿನ್ನನ್ನು ಕಚ್ಚುವುದಿಲ್ಲ, ನುಂಗುತ್ತದೆ!

-ರಷ್ಯಾ ಗಾದೆ

★ ಮುಂದೆ ಹೊಗಳಬಾರದು, ಹಿಂದೆ ತೆಗಳಬಾರದು.

-ಗಾದೆ

★ ಅರ್ಹತೆ ಇದ್ದಾಗ ಹೊಗಳಿಕೆ ವೃಥಾ ಮಾತಾಗುತ್ತದೆ. ನನ್ನ ಗುಣಗಳನ್ನು ದುರ್ಬಲಗೊಳಿಸಬಾರದು. ನನಗೆ ಎಚ್ಚರಿಕೆ ತಪ್ಪಿದರೆ ಅದರಿಂದ ನನ್ನ ತಲೆ ತಿರುಗಬಹುದು.

-ಮಹಾತ್ಮ ಗಾಂಧೀಜಿ

★ ಹೊಟ್ಟೆ ಭಾಷಣಗಳನ್ನು ಕೇಳದು, ಅದಕ್ಕೆ ಕಿವಿ ಇಲ್ಲ.

-ಪ್ಲೂಟಾರ್ಕ್

★ ಹೊಗಳಿಕೆ, ಪ್ರಖ್ಯಾತಿ ಅನ್ನೋದು ಒಂದು ನದಿ ಇದ್ದಂತೆ. ಹಗುರವಾದದ್ದನ್ನು ತೇಲಿಸಿ ಮೇಲೆ ತೋರಿಸುತ್ತದೆ. ತೂಕವಾದದ್ದನ್ನು ಮುಳುಗಿಸುತ್ತದೆ.

-ಫ್ರಾನ್ಸಿಸ್ ಬೇಕನ್

★ ಹೊಟ್ಟೆಯನ್ನು ನೋಡಿಕೊಳ್ಳದವ ಇನ್ನೇನನ್ನೂ ಸರಿಯಾಗಿ ನೋಡಿಕೊಳ್ಳಲಾರ.

-ಸ್ಯಾಮುಯಲ್ ಜಾನ್ಸನ್

★ ಬುದ್ಧಿವಂತ ಗಂಡಸನ್ನು ಅವನಿಲ್ಲದಾಗ ಹೊಗಳು; ಬುದ್ಧಿವಂತೆ ಹೆಂಗಸನ್ನು ಅವಳೆದುರು ಹೊಗಳು.

-ವೆಲ್ಷ್ ಗಾದೆ

★ ಹೊಗಳಿಕೆಯಿಂದ ಒಳ್ಳೆಯವ ಮತ್ತಷ್ಟು ಒಳ್ಳೆಯವನಾದರೆ, ಕೆಟ್ಟವ ಮತ್ತಷ್ಟು ಕೆಟ್ಟವನಾಗುತ್ತಾನೆ.

-ಡೇನಿಷ್ ಗಾದೆ

★ ಹೊಗಳುವವ ಮೋಸ ಪಡಿಸಿದ್ದಾನೆ; ಇಲ್ಲವೆ ಮೋಸ ಪಡಿಸುವುದರಲ್ಲಿದ್ದಾನೆ.

-ಹಂಗೆರಿ ಗಾದೆ

★ ಹೆಂಡತಿಯನ್ನು ಕಿವಿ ಹುಡುಕಲಿ, ಕಣ್ಣಲ್ಲ.

-ರಷ್ಯನ್ ಗಾದೆ

★ ಜನರು ಹಣ, ಬಂಗಾರ, ಒಡವೆ, ಆಸ್ತಿ-ಪಾಸ್ತಿ ಇತ್ಯಾದಿಗಳೇ ಮುಖ್ಯವೆಂದು ಭಾವಿಸಿ ಒದ್ದಾಡುತ್ತಿರುತ್ತಾರೆ. ಆದರೆ ಮಾನವನ ಜೀವನದಲ್ಲಿ ಅತಿಮುಖ್ಯವಾದ ವಸ್ತುವೆಂದರೆ ಗಾಳಿ. ಅದರಲ್ಲೂ ಆಮ್ಲಜನಕ- ಅದು ಪ್ರಾಣವಾಯು. ಆದ್ದರಿಂದಲೇ ವಾಯುಮಾಲಿನ್ಯ ಉಂಟಾಗದಂತೆ ಎಚ್ಚರ ವಹಿಸುವುದು ಎಲ್ಲಕ್ಕಿಂತ ಅಗತ್ಯ.

-ವೀರೇಂದ್ರ ಹೆಗ್ಗಡೆ

★ ಹಿಂದಿನದು ಇಲ್ಲದಿದ್ದರೆ ಮುಂದಿನದಿಲ್ಲ; ಮುಂದಿನದು ಹಿಂದಿನವರ ಮುಂಬರಿತ.

-ಡಿ.ವಿ.ಗುಂಡಪ್ಪ

★ ಹೊಸತೆ ಇರಲಿ, ಹಳತೆ ಇರಲಿ- ಒಳಿತು ಯಾವುದೋ ಬಾಳ್ಗೆ ಬರಲಿ.

-ಆನಂದಕಂದ (ಬೆಟಗೇರಿ ಕೃಷ್ಣಶರ್ಮ)

★ ಒಳ್ಳೆಯ ಹೆಂಡತಿ ಇದ್ದರೆ ನರಕವೂ ಸ್ವರ್ಗವೇ.

-ಜರ್ಮನ್ ಗಾದೆ

★ ಸ್ನೇಹಿತರೇ ಮನೆಗೆ ಭೂಷಣ

-ಎಮರ್‌ಸನ್